# All India Radio: Bangalore
# National Bulletins In Kannada
# 07.07.2025 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**07.07.2025 / 19.35 hrs**

**<><*<><>*><>**

<u>ಮುಖ್ಯಾಂಶಗಳು</u>

- ೧೭ನೇ ಬ್ರಿಕ್ಸ್ ಶೃಂಗಸಭೆ; ರಿಯೊ ಡಿ ಜನೈರೊದಲ್ಲಿ ಇಂದು, ಪರಿಸರ, 'ಸಿಒಪಿ-೩೦' ಹಾಗೂ ಜಾಗತಿಕ ಆರೋಗ್ಯದ ಕುರಿತು ಅಧಿವೇಶನ

- ಯಾವುದೇ ದೇಶವು, ತನ್ನ ಸ್ವಾರ್ಥಕ್ಕಾಗಿ ನಿರ್ಣಾಯಕ ಖನಿಜಗಳು, ತಂತ್ರಜ್ಞಾನ, ಪೂರೈಕೆ ಸರಪಳಿಗಳನ್ನು ಅಸ್ತ್ರವಾಗಿ ಬಳಸಬಾರದು - ಬ್ರಿಕ್ಸ್ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ

- 'ಆಪರೇಷನ್ ಸಿಂಧೂರ್' ಬಳಿಕ ಭಾರತದ ಸ್ಥಳೀಯ ರಕ್ಷಣಾ ಉತ್ಪನ್ನಗಳಿಗೆ ಜಾಗತಿಕ ಬೇಡಿಕೆ- ರಕ್ಷಣಾ ಸಚಿವ

- ೨೦೨೭ ರ ಜನಗಣತಿಯ ಎರಡೂ ಹಂತಗಳಲ್ಲಿ ಸ್ವಯಂ-ಗಣತಿಗಾಗಿ ವಿಶೇಷ ಜಾಲತಾಣ ಪೋರ್ಟಲ್ ಲಭ್ಯ

**<><*<><>*><>**

ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ೧೭ನೇ ಬ್ರಿಕ್ಸ್ ಶೃಂಗಸಭೆಯ ಎರಡನೇ ದಿನವಾದ ಇಂದು ರಿಯೊ ಡಿ ಜನೈರೊದಲ್ಲಿ ಪರಿಸರ, ಸಿಒಪಿ ೩೦ ಮತ್ತು ಜಾಗತಿಕ ಆರೋಗ್ಯದ ಕುರಿತು ಅಧಿವೇಶನ ನಡೆಯಲಿದೆ. ಈ ಅಧಿವೇಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ಪರಿಸರ ಕ್ರಮಕ್ಕೆ ಭಾರತದ ಆಳವಾದ ಬದ್ಧತೆಯನ್ನು ಪುನರುಚ್ಚರಿಸಲಿದ್ದಾರೆ. ಜನರು ಮತ್ತು ಗ್ರಹಗಳ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಭಾರತ ತೆಗೆದುಕೊಂಡ ಉಪಕ್ರಮಗಳ ಬಗ್ಗೆಯೂ ಅವರು ವಿವರಿಸಲಿದ್ದಾರೆ. ಅಂತರರಾಷ್ಟ್ರೀಯ ಸೌರ ಒಕ್ಕೂಟ, ವಿಪತ್ತು ನಿರೋಧಕ ಮೂಲಸೌಕರ್ಯಕ್ಕಾಗಿ ಒಕ್ಕೂಟ, ಜೈವಿಕ ಇಂಧನ ಮೈತ್ರಿ, ಬಿಗ್ ಕ್ಯಾಟ್ ಮಿಷನ್ ಕುರಿತ ಉಪಕ್ರಮಗಳನ್ನು ಪ್ರಧಾನಿ ಪ್ರಸ್ತಾಪಿಸಲಿದ್ದಾರೆ.

**ಈ ಕುರಿತು ರಿಯೊ ಡಿ ಜನೈರೊದಿಂದ ನಮ್ಮ ಬಾತ್ಮೀದಾರರಿಂದ ಹೆಚ್ಚಿನ ಮಾಹಿತಿ.**

ಧ್ವನಿ: ಎಚ್.ಆರ್.ಸುಧೀಂದ್ರ ( ೪೨ ಸೆಕೆಂಡ್ಸ್)

ಬಳಿಕ ಪ್ರಧಾನಿ ನರೇಂದ್ರ ಮೋದಿ, ಬ್ರೆಜಿಲ್‌ನ ರಾಜಧಾನಿ ಬ್ರೆಸಿಲಿಯಾಕ್ಕೆ ತೆರಳಲಿದ್ದಾರೆ. ೫೭ ವರ್ಷಗಳ ತೆರಳಲಿದ್ದಾರೆ. ೫೭ ವರ್ಷಗಳ ನಂತರ ಭಾರತೀಯ ಪ್ರಧಾನಿಯೊಬ್ಬರು ಬ್ರೆಸಿಲಿಯಾಕ್ಕೆ ಭೇಟಿ ಬ್ರೆಸಿಲಿಯಾಕ್ಕೆ ಭೇಟಿ ನೀಡುತ್ತಿದ್ದಾರೆ. ನಾಳೆ ಪ್ರಧಾನಿ ಅವರು, ನಾಲ್ಕು ಒಪ್ಪಂದಗಳಿಗೆ ಸಹಿ ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ ಎಂದು ಬ್ರೆಜಿಲ್‌ನಲ್ಲಿರುವ ಭಾರತೀಯ ರಾಯಭಾರಿ ದಿನೇಶ್ ರಾಯಭಾರಿ ದಿನೇಶ್ ಭಾಟಿಯಾ ತಿಳಿಸಿದ್ದಾರೆ. ಭಯೋತ್ಪಾದನೆ ನಿಗ್ರಹದಲ್ಲಿ ಒಟ್ಟಾಗಿ ಕೆಲಸ

ಒಟ್ಟಾಗಿ ಕೆಲಸ ಮಾಡುವುದು, ಪರಸ್ಪರ ಹಂಚಿಕೊಳ್ಳುವುದು ಇವುಗಳ ಉದ್ದೇಶವಾಗಿದೆ.

ಉದ್ದೇಶವಾಗಿದೆ.

**<><*<><>*><>**

ಯಾವುದೇ ದೇಶವು ತನ್ನ ಸ್ವಾರ್ಥಕ್ಕಾಗಿ ನಿರ್ಣಾಯಕ ಖನಿಜಗಳು, ತಂತ್ರಜ್ಞಾನ ಮತ್ತು ಪೂರೈಕೆ ಸರಪಳಿಗಳನ್ನು ಅಸ್ತ್ರವಾಗಿ ಬಳಸಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ರಿಯೊ ಡಿ ಜನೈರೊದಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ನಡೆದ ಸಂಪರ್ಕ ಸಭೆಯಲ್ಲಿ, ನಿರ್ಣಾಯಕ ಖನಿಜಗಳು ಮತ್ತು ತಂತ್ರಜ್ಞಾನದಲ್ಲಿ ಹೆಚ್ಚಿನ ಸಹಕಾರದ ಜೊತೆಗೆ, ತಮ್ಮ ಪೂರೈಕೆ ಸರಪಳಿಗಳನ್ನು ಸುರಕ್ಷಿತಗೊಳಿಸುವ ಮತ್ತು ಸ್ಥಿತಿಸ್ಥಾಪಕವಾಗಿಸುವತ್ತ ಗಮನಹರಿಸುವ ಅಗತ್ಯವಿದೆ ಎಂದು ಅವರು ಹೇಳಿದರು. ಬ್ರಿಕ್ಸ್ ಹೊಸ ಅಭಿವೃದ್ಧಿ ಬ್ಯಾಂಕ್ ಯೋಜನೆಗಳಲ್ಲಿ ಬೇಡಿಕೆ ಆಧಾರಿತ ನಿರ್ಧಾರ ತೆಗೆದುಕೊಳ್ಳುವಿಕೆ, ದೀರ್ಘಕಾಲೀನ ಆರ್ಥಿಕ ಸುಸ್ಥಿರತೆ ಮತ್ತು ಆರೋಗ್ಯಕರ ಕ್ರೆಡಿಟ್ ರೇಟಿಂಗ್ ಅನ್ನು ಕಾಯ್ದುಕೊಳ್ಳುವತ್ತ ಗಮನ ಹರಿಸಬೇಕು ಎಂದು ಪ್ರಧಾನಿ ತಿಳಿಸಿದರು. ೨೧ ನೇ ಶತಮಾನದಲ್ಲಿ ಜನರ ಪ್ರಗತಿ ಮತ್ತು ಯೋಗಕ್ಷೇಮವು, ತಂತ್ರಜ್ಞಾನವನ್ನು, ವಿಶೇಷವಾಗಿ ಕೃತಕ ಬುದ್ಧಿಮತ್ತೆಯನ್ನು ಅವಲಂಬಿಸಿದೆ. ಕೃತಕಬುದ್ಧಿಮತ್ತೆ ದೈನಂದಿನ ಜೀವನವನ್ನು ಹೆಚ್ಚು ಸುಧಾರಿಸುತ್ತದೆ. ಅದೇ ರೀತಿ ಇದು ಅಪಾಯಗಳು, ನೈತಿಕತೆ, ಪಕ್ಷಪಾತ ಧೋರಣೆಯಿಂದ ಕಳವಳ ಹುಟ್ಟಿಸುತ್ತದೆ ಎಂದು ಪ್ರಧಾನಿ ಹೇಳಿದರು. ಮಾನವ ಮೌಲ್ಯಗಳು ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವ ಮಾಧ್ಯಮವಾಗಿ ಕೃತಕಬುದ್ಧಿಮತ್ತೆಯನ್ನು ನೋಡುವುದರಿಂದ, ಅದರ ಬಗ್ಗೆ ಭಾರತದ ವಿಧಾನ ಮತ್ತು ನೀತಿ ಸ್ಪಷ್ಟವಾಗಿದೆ ಎಂದು ಅವರು ಒತ್ತಿ ಹೇಳಿದರು. ಇಂದು ಭಾರತವು ಕೃಷಿ, ಆರೋಗ್ಯ, ಶಿಕ್ಷಣ ಮತ್ತು ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ವ್ಯಾಪಕವಾಗಿ ಮತ್ತು ಸಕ್ರಿಯವಾಗಿ ಬಳಸುತ್ತಿದೆ ಎಂದು ಹೇಳಿದರು. ಕೃತಕ ಬುದ್ಧಿಮತ್ತೆ ಆಡಳಿತದಲ್ಲಿ ಕಳವಳಗಳನ್ನು ಪರಿಹರಿಸುವುದು ಮತ್ತು ನಾವೀನ್ಯತೆಯನ್ನು ಪ್ರೋತ್ಸಾಹಿಸುವುದಕ್ಕೆ ಸಮಾನ ಪ್ರಾಮುಖ್ಯತೆಯನ್ನು ನೀಡಬೇಕು ಎಂದು ಅವರು ಹೇಳಿದರು.

**<><*<><>*><>**

ಇತ್ತೀಚಿಗೆ ನಡೆಸಲಾದ ’ಆಪರೇಷನ್ ಸಿಂಧೂರ್’ ಸಮಯದಲ್ಲಿ ಪ್ರದರ್ಶಿಸಲಾದ ಭಾರತದ ದೇಶೀಯ ಭಾರತದ ದೇಶೀಯ ಉಪಕರಣಗಳ ಸಾಮರ್ಥ್ಯವು, ಸ್ಥಳೀಯ ರಕ್ಷಣಾ ಉತ್ಪನ್ನಗಳಿಗೆ ಜಾಗತಿಕ ಜಾಗತಿಕ ಬೇಡಿಕೆಯನ್ನು ಹೆಚ್ಚಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಹೇಳಿದ್ದಾರೆ. ನವದೆಹಲಿಯಲ್ಲಿಂದು ನಡೆದ ನಿಯಂತ್ರಕರ ಸಮ್ಮೇಳನದಲ್ಲಿ ಮಾತನಾಡಿದ ಸಚಿವರು, ಮಾತನಾಡಿದ ಸಚಿವರು, ಭಾರತದ ರಕ್ಷಣಾ ಕೈಗಾರಿಕೆಗಳು ಅಪಾರ ಸಾಧ್ಯತೆಗಳನ್ನು ಹೊಂದಿವೆ. ಪ್ರಧಾನಿ ಹೊಂದಿವೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ರಕ್ಷಣಾ ವಲಯದಲ್ಲಿ ವಲಯದಲ್ಲಿ ಸ್ವಾವಲಂಬನೆಯನ್ನು ಬಹುತೇಕ ಸಾಧಿಸಿದೆ ಎಂದು ಅವರು ಹೇಳಿದರು. ಹಿಂದೆ ಹಿಂದೆ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದ ಹೆಚ್ಚಿನ ರಕ್ಷಣಾ ಉಪಕರಣಗಳನ್ನು, ಉಪಕರಣಗಳನ್ನು, ಪ್ರಸ್ತುತ ದೇಶದಲ್ಲಿಯೇ ತಯಾರಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಮರು ತಿಳಿಸಿದರು. ಮರು ಸಶಸ್ತ್ರೀಕರಣ ಮತ್ತು ಸಂಬಂಧಿತ ಹೂಡಿಕೆಗಳು ವೇಗವಾಗಿ ಹೆಚ್ಚುತ್ತಿರುವ ಇಂದಿನ

ಹೆಚ್ಚುತ್ತಿರುವ ಇಂದಿನ ಯುಗದಲ್ಲಿ, ರಕ್ಷಣಾ ಆರ್ಥಿಕತೆಯ ಬಗ್ಗೆ ಸಚಿವರು ಒತ್ತು ನೀಡಿದರು. ಇಂದು, ನೀಡಿದರು. ಇಂದು, ಅಮೆರಿಕ ಮತ್ತು ಯುರೋಪಿಯನ್ ರಾಷ್ಟ್ರಗಳು ಸೇರಿದಂತೆ ಬಹುತೇಕ ಎಲ್ಲಾ ಬಹುತೇಕ ಎಲ್ಲಾ ಪ್ರಮುಖ ದೇಶಗಳು ತಮ್ಮ ರಕ್ಷಣಾ ವೆಚ್ಚವನ್ನು ಹೆಚ್ಚಿಸುತ್ತಿವೆ. ಇಂದು, ಭಾರತ ಹೆಚ್ಚಿಸುತ್ತಿವೆ. ಇಂದು, ಭಾರತ ಸೇರಿದಂತೆ ಇಡೀ ಜಗತ್ತು ಮರು ಸಶಸ್ತ್ರೀಕರಣದ ಹೊಸ ಹಂತದ ಹೊಸ ಹಂತದ ಮೂಲಕ ಸಾಗುತ್ತಿದೆ. ಭಾರತದ ರಕ್ಷಣಾ ಸಚಿವಾಲಯದ ಬಜೆಟ್ ಅತ್ಯಧಿಕವಾಗಿದೆ ಅತ್ಯಧಿಕವಾಗಿದೆ ಎಂದು ಸಚಿವರು ತಿಳಿಸಿದರು.

**<><*<><>*><>**

ಮುಂಬರುವ ಜನಗಣತಿಯ ಸಮಯದಲ್ಲಿ ಸ್ವಯಂ-ಗಣತಿಗಾಗಿ ವಿಶೇಷ ಮೀಸಲಾದ ಜಾಲತಾಣ ಪೋರ್ಟಲ್ ಲಭ್ಯವಿರುತ್ತದೆ. ಇದು ಜನಗಣತಿ -೨೦೨೭ ರ ಎರಡೂ ಹಂತಗಳಿಗೆ ಲಭ್ಯವಿರುತ್ತದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸರಣಿ ಪೋಸ್ಟ್‌ಗಳ ಮೂಲಕ ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು, ಇದು ದೇಶದಲ್ಲಿ ಮೊದಲ ಡಿಜಿಟಲ್ ಜನಗಣತಿಯಾಗಲಿದೆ. ಇಂಗ್ಲಿಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿಕೊಂಡು ದತ್ತಾಂಶ ಸಂಗ್ರಹಿಸಲಾಗುವುದು ಎಂದು ತಿಳಿಸಿದ್ದಾರೆ. ಗಣತಿದಾರರು ಮತ್ತು ಮೇಲ್ವಿಚಾರಕರು ದತ್ತಾಂಶ ಸಂಗ್ರಹಣೆಗಾಗಿ ತಮ್ಮ ಮೊಬೈಲ್ ಸಾಧನಗಳನ್ನು ಬಳಸುತ್ತಾರೆ ಎಂದು ತಿಳಿಸಿದ ಅವರು, ೨೦೨೭ ರ ಜನಗಣತಿ - ಗೆಜೆಟ್ ಅಧಿಸೂಚನೆಯನ್ನು ಕಳೆದ ತಿಂಗಳು ಹೊರಡಿಸಲಾಯಿತು. ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು, ತಮ್ಮ ರಾಜ್ಯ ಗೆಜೆಟ್‌ನಲ್ಲಿ ಉದ್ದೇಶದ ಅಧಿಸೂಚನೆಯನ್ನು ಮರುಪ್ರಕಟಿಸಲು ಮತ್ತು ಜನಗಣತಿಗಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ಸೂಚಿಸಲಾಗಿದೆ. ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುತಿದ್ದು, ಮೊದಲ ಹಂತದಲ್ಲಿ, ವಸತಿ ಪಟ್ಟಿ ಮತ್ತು ವಸತಿ ಜನಗಣತಿಯನ್ನು ಏಪ್ರಿಲ್ ೨೦೨೬ ರಿಂದ ಪ್ರಾರಂಭಿಸಲಾಗುವುದು, ಎರಡನೇ ಹಂತದಲ್ಲಿ ಜನಗಣತಿಯನ್ನು ನಡೆಸಲಾಗುವುದು ಎಂದು ಜನಗಣತಿ ಆಯುಕ್ತರು ಮಾಹಿತಿ ನೀಡಿದ್ದಾರೆ.

**<><*<><>*><>**

ರೈತರು ಬಳಸುವ ರಸಗೊಬ್ಬರಗಳು ಅಸಲಿಯೋ ಅಥವಾ ನಕಲಿಯೋ ಎಂಬುದನ್ನು ನಿರ್ಧರಿಸಲು ವೈಜ್ಞಾನಿಕ ತಂತ್ರಜ್ಞಾನಗಳು ಮತ್ತು ಸಾಧನಗಳನ್ನು ಬಳಸುವ ಅಗತ್ಯವಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ನವದೆಹಲಿಯ ಪುಸಾ ಕ್ಯಾಂಪಸ್‌ನಲ್ಲಿಂದು ಭಾರತೀಯ ಕೃಷಿ ಸಂಶೋಧನಾ ಮಂಡಳಿ-ಐಸಿಎಆರ್ ನ ೯೬ನೇ ವಾರ್ಷಿಕ ಸಾಮಾನ್ಯ ಸಭೆಯನ್ನುದ್ದೇಶಿಸಿ ಮಾತನಾಡಿದ ಸಚಿವರು, ಕೃಷಿ ಕ್ಷೇತ್ರದಲ್ಲಿ ನಾವೀನ್ಯತೆ, ಸುಸ್ಥಿರ ಅಭಿವೃದ್ಧಿ ಮತ್ತು ರೈತರ ಕಲ್ಯಾಣಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಿದರು. ರಾಷ್ಟ್ರ ನಿರ್ಮಾಣದಲ್ಲಿ ರೈತರ ಕೊಡುಗೆಯನ್ನು ಶ್ಲಾಘಿಸಿದ ಸಚಿವರು, ಇಂದಿನಿಂದ ಸಂಶೋಧನೆಯನ್ನು ಪ್ರಯೋಗಾಲಯದಿಂದ ಮಾತ್ರವಲ್ಲದೆ, ರೈತರ ಕ್ಷೇತ್ರದಿಂದ ಕೂಡ ನಿರ್ಧರಿಸಲಾಗುತ್ತದೆ ಎಂದು ಪ್ರತಿಪಾದಿಸಿದರು.

**<><*<><>*><>**

೨೦೩೦ ರ ವೇಳೆಗೆ ಭಾರತವು, ೩೦೦ ಬಿಲಿಯನ್ ಜೈವಿಕ ಆರ್ಥಿಕತೆಯ ಗುರಿಯನ್ನು ಹೊಂದಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ದೇಶದ ಜೈವಿಕ ತಂತ್ರಜ್ಞಾನ ಪರಿಸರ ವ್ಯವಸ್ಥೆಯು ಒಂದು ದಶಕದಲ್ಲಿ ೫೦ ನವೋದ್ಯಮಗಳಿಂದ ಪ್ರಸ್ತುತ ಸುಮಾರು ೧೧ ಸಾವಿರಕ್ಕೆ ಬೆಳೆಯುತ್ತಿದೆ ಎಂದು ಅವರು ಒತ್ತಿ ಹೇಳಿದರು. ಇತ್ತೀಚೆಗೆ ಬಿಡುಗಡೆಯಾದ ಬಯೋ-ಈ೩ ನೀತಿಯನ್ನು ಉಲ್ಲೇಖಿಸಿದ ಸಚಿವರು, ಜೈವಿಕ ಆರ್ಥಿಕತೆಯ ಗುರಿಗಳನ್ನು ಪರಿಸರ ಸುಸ್ಥಿರತೆ, ಆರ್ಥಿಕ ಬೆಳವಣಿಗೆ ಮತ್ತು ಸಮಾನತೆಯೊಂದಿಗೆ ಜೋಡಿಸುವ ಮೂಲಕ ಸುಸ್ಥಿರ ಜೈವಿಕ ಉತ್ಪಾದನೆಯಲ್ಲಿ ದೇಶವು ಮುನ್ನಡೆಸಲು ಇದು ಅಡಿಪಾಯ ಹಾಕಲಿದೆ ಎಂದು ತಿಳಿಸಿದ್ದಾರೆ.

**<><*<><>*><>**

ದೇಶದ ಎಲ್ಲ ನಾಗರಿಕರಿಗೆ ಸುಲಭ ಹಾಗೂ ಸಮಾನತೆಯಿಂದ ಆರೋಗ್ಯ ಸೇವೆಗಳನ್ನು ಒದಗಿಸುವ ವ್ಯವಸ್ಥೆಯತ್ತ ಭಾರತ ಶೀಘ್ರದಲ್ಲೇ ತಲುಪಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ತಿಳಿಸಿದ್ದಾರೆ. ರಾಷ್ಟ್ರೀಯ ದಿನಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಅವರು, ಈ ಕುರಿತು ಮಾಹಿತಿ ನೀಡಿದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೩೫ ಕ್ಕೆ <>*><>**